**ಒ.ಎಸ್.ನಂಬ್ರ: 195/2013 ಪಿ.ಡಬ್ಲ್ಯೂ : 3**

ದಿನಾಂಕಃ 16-01-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲುಃ ಶ್ರೀ. ಸಿ .ಆರ್.ಪಿ ವಕೀಲರಿಂದ**

ನಾನು ಬಿ ಎ ಎಸ್ಸಿ ಪದವಿದರನಾಗಿದ್ದು ಪಿಡಬ್ಲೂ ಡಿ ಗುತ್ತಿಗೆದಾರ ಮತ್ತು ಕೃಷಿಕನಾಗಿರುತ್ತೇನೆ . ಕೋಟೆಶ್ವರ ಗ್ರಾಮದ ಕುಂಬ್ರಿ ಯ ವಾಸಿ. ನನ್ನ ತಂದೆ ಶ್ರೀನಿವಾಸ್ ಗಾಣಿಗ ಎಂದರೆ ಎಸ್ ಕೆ ಗಾಣಿಗ ನನ್ನ ಅಜ್ಜ ತಿಮ್ಮಪ್ಪಯ್ಯ ಗಾಣಿಗ ಎಂದರೆ ಸರಿ. ವಾದಿಯರ ಮತ್ತು ಪ್ರತಿವಾದಿ ನಮ್ಮ ಗ್ರಾಮಸ್ಥರು ಆಗಿದ್ದು ಬಾಲ್ಯದಿಂದ ಪರಿಚಯಸ್ಥರು. ನಾನೇ ಸ್ವಯಿಚ್ಚೆಯಿಂದ ಸಾಕ್ಷಿ ನುಡಿಯಲು ಬಂದಿರುತ್ತೇನೆ . ವಾದಿಯರ ಮನೆ ನಮ್ಮ ಮನೆಯಿಂದ 50 ಮೀಟರ್ ಒಳಗೆ ಇದೆ . ಬಾಲ್ಯದಿಂದ ಅಲ್ಲೇ ವಾಸವಿದ್ದೇನೆ . ವಾದಿಯರು ಮೂರು ಜನ ಬೇರೆ ಬೇರೆ ಕುಟುಂಬಕ್ಕೆ ಸೇರಿದವರು . ನನ್ನ ಮುಖ್ಯವಿಚಾರಣೆಯಲ್ಲಿ ತಿಳಿಸಿರುವ ಮನೆ ಅಡಿ ಸ್ಥಳ ಮೂರು ಜನ ವಾದಿಯರ ಬೇರೆ ಬೇರೆ ಮನೆ ಸ್ಥಳಾಗಿದ್ದು ಡೋರ್ ನಂಬರ್ ನನಗೆ ತಿಳಿದಿಲ್ಲ . ಅದರ ಪ್ರತ್ಯೇಕ ಸರ್ವೇ ನಂಬರ್ ಹಾಗೂ ವಿಸ್ತೀರ್ಣ ತಿಳಿದಿಲ್ಲ . ನಮ್ಮ ಮನೆಯ ಉತ್ತರ ದಿಕ್ಕಿಗೆ ವಾದಿಯರ ಮನೆ ಇದ್ದು ಅದರ ಉತ್ತರ ಕ್ಕೆ ಪ್ರತಿವಾದಿ ಮನೆ ಇದೆ ಅವುಗಳ ಸರ್ವೇ ನಂಬರ್ ತಿಳಿದಿಲ್ಲ . 1 ನೇ ವಾದಿಯ ಮನೆಯ ಉತ್ತರಕ್ಕೆ 2 ನೇ ವಾದಿ ದಕ್ಷಿಣಕ್ಕೆ ರಮೇಶ್ ಮನೆ , ಪೂರ್ವಕ್ಕೆ 3 ನೇ ವಾದಿಯ ಮನೆ ಮತ್ತು ಪಶ್ಚಿಮಕ್ಕೆ ಬಯಲು ಇದೆ. 2 ನೇ ವಾದಿಯ ಮನೆಯ ಉತ್ತರಕ್ಕೆ ಪ್ರತಿವಾದಿಯ ಮನೆ , ಪೂರ್ವಕ್ಕೆ 3 ನೇ ವಾದಿಯ ಜಾಗ , ಪಶ್ಚಿಮಕ್ಕೆ ಬಯಲು ಇದೆ . 3 ನೇ ವಾದಿಯ ಜಾಗಕ್ಕೆ ತಾಗಿ ಪೂರ್ವಕ್ಕೆ ಕುಂಬ್ರಿ ಬೆಟ್ಟು ರಸ್ತೆ ಇದೆ . ಸಾಕ್ಷಿಯು 3 ನೇ ವಾದಿ ಯ ಜಾಗ ಮತ್ತು ರಸ್ತೆಯ ಮದ್ಯೆ ದಿನೇಶ್ ಪೂಜಾರಿರವರ ಜಾಗ ಬರುತ್ತದೆ ಎಂದು ನುಡಿದಿರುತ್ತಾರೆ . 3 ನೇ ವಾದಿಯ ಸ್ವತ್ತಿನ ಉತ್ತರಕ್ಕೆ ದಾವಾ ರಸ್ತೆ , ದಕ್ಷಿಣಕ್ಕೆ ರತ್ನಾಕರ ಗಾಣಿಗ ರವರ ಮನೆ ಇದೆ .

1 ರಿಂದ 3 ವಾದಿಗಳ ಮನೆಗಳು ಒಂದೇ ಆವರಣದಲ್ಲಿದೆ . ಪ್ರತಿವಾದಿಯ ಜಾಗದ ದಕ್ಷಿಣಕ್ಕೆ 12 ಅಡಿ ರಸ್ತೆ , ಅದರ ದಕ್ಷಿಣಕ್ಕೆ 3 ನೇ ವಾದಿಯ ಸ್ವತ್ತು ಇದೆ . ಪ್ರತಿವಾದಿಯ ಸ್ವತ್ತಿನ ಪೂರ್ವಕ್ಕೆ ಕುಂಬ್ರಿ ಬೆಟ್ಟು ರಸ್ತೆ , ಪಶ್ಚಿಮಕ್ಕೆ ಮಹಾಬಲ ಗೋಟ ರವರ ಮನೆ ಉತ್ತರಕ್ಕೆ ಬಯಲು ಇದೆ. ಈ ಎಲ್ಲಾ ಸ್ವತ್ತುಗಳ ದಕ್ಷಿಣಕ್ಕೆ ಕೋಡಿ ಕಿನಾರ ರಸ್ತೆ ಬರುತ್ತದೆ. ಅಲ್ಲಿಂದ ಉತ್ತರಕ್ಕೆ ಕುಂಬ್ರಿ ಬೆಟ್ಟು ರಸ್ತೆ ಬರುತ್ತದೆ. ವಾದಿ ಮತ್ತು ಪ್ರತಿವಾದಿಯರ ಸ್ವತ್ತಿನ ಪೂರ್ವ ದಿಕ್ಕಿನಲ್ಲಿ ಕುಂಬ್ರಿ ಬೆಟ್ಟು ರಸ್ತೆ ಬರುತ್ತದೆ . 3 ವಾದಿಗಳ ಪ್ರತ್ಯೇಕ ಮನೆ, ಬಾವಿ ಮತ್ತು ಕೊಟ್ಟಿಗೆ ಇತ್ತು . ವಾದಿಗಳ ಮನೆ ನಿರ್ಮಾಣ ವಾಗುವ ಮೊದಲು ಏನು ಇತ್ತು ಎಂದು ನನಗೆ ತಿಳಿದಿಲ್ಲ . ವಾದಿಯರಿಗೆ ಸದರಿ ಸ್ವತ್ತುಗಳು ಹೇಗೆ ಬಂತು ಎಂದು ನನಗೆ ತಿಳಿದಿಲ್ಲ. 3 ವಾದಿಗಳ ಸ್ವತ್ತುಗಳ ಪೈಕಿ ಅತೀ ಪೂರ್ವದ ಸ್ವತ್ತು 3 ನೇ ವಾದಿಯದ್ದು ಎಂದರೆ ಸರಿ. ದಿನೇಶ್ ಪೂಜಾರಿ ಸ್ವತ್ತು ಮತ್ತು ಕುಂಬ್ರಿ ಬೆಟ್ಟು ರಸ್ತೆ ಯ ಮದ್ಯೆ ನೀರಿನ ತೋಡು ಇದೆ . ದಿನೇಶ್

ಪುಜಾರಿ ಮತ್ತು 3 ನೇ ವಾದಿಯ ಸ್ವತ್ತುಗಳ ನಡುವೆ ರಿವಿಟ್‌ಮೆಂಟ್ ಇದ್ದು 2011 ರಲ್ಲಿ ನಿರ್ಮಿಸಿರುತ್ತಾರೆ . ಅದಕ್ಕೂ ಮೊದಲು ಖಾಲಿ ಇದ್ದು 3 ನೇ ವಾದಿಯ ಆವರಣದೊಂದಿಗಿತ್ತು . ದಿನೇಶ್ ಪೂಜಾರಿ ಯಾರಿಂದ ಸ್ವತ್ತು ಖರಿದಿಸಿದ್ದರು ನನಗೆ ತಿಳಿದಿಲ್ಲ .

3 ನೇ ವಾದಿಯ ತಂದೆಯ ಪರಿಚಯವಿದೆ . 3 ನೇ ವಾದಿಯ ತಂದೆ ದೇವು ಪುಜಾರಿ ಮತ್ತು ಅವರ ಅಣ್ಣ ಸೋಮು ಪುಜಾರಿ ರವರ ಪರಿಚಯ ಇದೆ . ದಿನೇಶ್ ಪೂಜಾರಿ ರವರು ಖರೀದಿಸಿದ ಸ್ವತ್ತು ಮೊದಲಿಗೆ ಸೋಮು ಪುಜಾರಿರವರಿಗೆ ಸೇರಿದ್ದು ನೇರವಾಗಿ ದಿನೇಶ್ ಪೂಜಾರಿವರಿಗೆ ಕ್ರಯವಾಗಿದೆಯಾ ನನಗೆ ತಿಳಿದಿಲ್ಲ. 3 ನೇ ವಾದಿ ಮತ್ತು ಸೋಮು ಪುಜಾರಿ ರವರಿಗೆ ಸ್ವತ್ತು ಯಾವಾಗ ಪಾಲಾಯಿತು ನನಗೆ ತಿಳಿದಿಲ್ಲ. 2003 ರಲ್ಲಿ ಸದರಿ ಪಾಲು 3 ನೇ ವಾದಿ ಮತ್ತು ಸೋಮು ಪುಜಾರಿರವರ ನಡುವೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ .

ಈ ದಾವೆಯಲಿ ನ್ಯಾಯಾಲಯದಿಂದ ಆಯುಕ್ತರ ನೇಮಕವಾಗಿದ್ದು ಅಳತೆಯಾದ ಬಗ್ಗೆ ಮಾಹಿತಿ ಇದೆ ಆದರೆ ನಾನು ಆಗ ಹಾಜರಿರಲಿಲ್ಲ . 3 ವಾದಿಯರ ಸ್ವತ್ತಿನ ಪೂರ್ವಕ್ಕೆ ಮತ್ತು ಉತ್ತರಕ್ಕೆ ಪ್ರತಿವಾದಿಯರ ಪಾಗರ ಇದೆ ಎಂದರೆ ಸರಿಯಲ್ಲ . ಕುಂಬ್ರಿ ಬೆಟ್ಟು ರಸ್ತೆಯಿಂದ ವಾದಿಯರ ಮನೆಗೆ ಸೇರಲು ಅದರ ದಕ್ಷಿಣಕ್ಕೆ ಕಾಲುದಾರಿ ಇದೆ ಎಂದರೆ ಸರಿಯಲ್ಲ. ರಸ್ತೆ ಕುಂಬ್ರಿ ಬೆಟ್ಟು ರಸ್ತೆಯಿಂದ ಪಶ್ಚಿಮಕ್ಕೆ ತಿರುಗಿ ವಾದಿಯರ ಮನೆಗೆ ಸೇರುತ್ತದೆ . ಸದರಿ ರಸ್ತೆ 12 ಅಡಿ ಇದ್ದು ಪ್ರತಿವಾದಿಯರ ದಕ್ಷಿಣಕ್ಕೆ ಅವರ ಸ್ವತ್ತಿನ ಒಳಗೆ ಬರುತ್ತದೆ ಎಂದು ಅನುಭವದಲ್ಲಿ ಹೇಳುತ್ತಿದ್ದೇನೆ ಅಳತೆ ಮಾಡಿಸಿಲ್ಲ . ಸದರಿ ರಸ್ತೆ ಪ್ರತಿವಾದಿಯ ಸ್ವತ್ತಿನಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ . ನನ್ನ ಬಾಲ್ಯದಿಂದಲೂ ಸದರಿ ರಸ್ತೆಯನ್ನು ಉಪಯೋಗಿಸುತ್ತಿದ್ದೇನೆ ಆ ರೀತಿ ಯಾವುದೇ ರಸ್ತೆ ಮೊದಲಿನಿಂದ ಇಲ್ಲವಾದರೂ ವಾದಿಯರಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಆದ್ದರಿಂದ ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಸಂಗತಿಗಳು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**